# ಪತ್ರಿಕಾ ಪ್ರಕಟಣೆ

## ಮೋಟಾರ ಸೈಕಲಗಳು ಕಳ್ಳತನ ಮಾಡಿದ ಕಳ್ಳರ ಬಂಧನ

ಕಲಬುರಗಿ ನಗರದ ಸಬ್ ಅರ್ಬನ್ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಮಾನ್ಯ ಡಾ. ಶ್ರೀ ವಾಯ್.ಎಸ್. ರವಿಕುಮಾರ, ಐ.ಪಿ.ಎಸ್. ಪೊಲೀಸ್ ಆಯುಕ್ತರು, ಕಲಬುರುಗಿ ನಗರ ಮಾನ್ಯ ಶ್ರೀ ಅಡ್ಡೂರ ಶ್ರೀನಿವಾಸಲು, ಐ.ಪಿ.ಎಸ್. ಉಪ ಪೊಲೀಸ ಆಯುಕ್ತರು (ಕಾ.ಸು.) ಕಲಬುರಗಿ ನಗರ, ಮಾನ್ಯ ಶ್ರೀ ಶ್ರೀಕಾಂತ ಕಟ್ಟಿಮನಿ ಉಪ ಪೊಲೀಸ ಆಯುಕ್ತರು ( ಅಪರಾಧ ಮತ್ತು ಸಂಚಾರ ) ಕಲಬುರಗಿ ನಗರ, ಮಾನ್ಯ ಎ.ಸಿ.ಪಿ. ಶ್ರೀ ಜೆ. ಹೆಚ್. ಇನಾಮದಾರ ಸಬ್ ಅರ್ಬನ್ ಉಪವಿಭಾಗ ಕಲಬುರಗಿ ನಗರ ರವರ ಮಾರ್ಗದರ್ಶನದಲ್ಲಿ ಶ್ರೀ ಬಾಸು ಚವ್ಹಾಣ ಪಿ.ಐ. ಗ್ರಾಮೀಣ ಪೊಲೀಸ ಠಾಣೆ ಕಲಬುರಗಿ ನಗರ ಇವರ ನೇತೃತ್ವದಲ್ಲಿ ಶ್ರೀ ಕವಿತಾ ಚವ್ಹಾಣ ಪಿ.ಎಸ್.ಐ. (ಕಾ.ಸು.), ಮತ್ತು ಸಿಬ್ಬಂದಿಯವರಾದ ಶ್ರೀ ರಾಜಕುಮಾರ, ಸಿರಾಜ ಪಟೇಲ, ಅಂಬಾಜಿ ಮಲ್ಲಿಕಾರ್ಜುನ, ನಾಗೇಂದ್ರ, ಪ್ರಕಾಶ, ಅನೀಲ ರಾಠೋಡ, ಅನೀಲ, ಪ್ರಶಾಂತ, ಮತ್ತು ಚನ್ನಬಸಯ್ಯ ಇವರು ಕಲಬುರಗಿ ನಗರದ ಶಹಾ ಸುಲ್ತಾನಪೂರ ರಸ್ತೆಗೆ ಇರುವ ಆಳಂದ ಚೆಕ್ಕಪೋಸ್ಟ ಹತ್ತಿರ, ಎ.ಪಿ.ಎಮ್.ಸಿ.ಯಲ್ಲಿ ಹಾಗು ಇತರೆ ಸ್ಥಳಗಳಲ್ಲಿ ಮೋಟಾರ ಸೈಕಲಗಳನ್ನು ಕಳ್ಳತನ ಮಾಡಿರುವ 1) ಕಲ್ಯಾಣಿ ತಂದೆ ಸಾಯಿಬಣ್ಣ ನಿಂಬಾಳ ವ॥ 22 ವರ್ಷ ಉ॥ ಕೂಲಿಕೆಲಸ ಜಾತಿ॥ ಲಿಂಗಾಯತ ಸಾ॥ ನಿಂಬಾಳ ತಾ॥ ಆಳಂದ ಹಾ॥ ವ॥ ಕಮಲ ನಗರ ಕಲಬುರಗಿ 2) ಸುರೇಶ ತಂದೆ ನರಸಪ್ಪ ಬೀದರ ವ॥ 22 ವರ್ಷ ಉ॥ ಕೂಲಿಕೆಲಸ ಜಾತಿ॥ ಪ.ಜಾತಿ ಸಾ॥ ಲಂಗರ ಹನುಮಾನ ನಗರ ಕಲಬುರಗಿ ಇವರನ್ನು ದಿನಾಂಕ 18.04.2022 ರಂದು ಹಿಡಿದು ಅವರಿಂದ ಒಟ್ಟು 14 ವಿವಿಧ ಕಂಪನಿಯ ಮೋಟಾರ ಸೈಕಲಗಳು ಅ.ಕಿ. 7,00,000/- ರೂಪಾಯಿ ಕಿಮ್ಮತ್ತಿನ ಮುದ್ದೆಮಾಲನ್ನು ಜಪ್ತಿ ಪಡಿಸಿಕೊಂಡು ನ್ಯಾಯಾಂಗ ಬಂಧನಕ್ಕೆ ಕಳುಹಿಸಿಕೊಡಲಾಗಿದೆ.

ಕಲಬುರಗಿ ನಗರದ ವಿವಿಧ ಕಡೆಗಳಲ್ಲಿ ಮೋಟಾರ ಸೈಕಲಗಳನ್ನು ಕಳ್ಳತನ ಮಾಡಿದ ಕಳ್ಳರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಕಳುಹಿಸಿಕೊಡುವಲ್ಲಿ ಯಶಸ್ವಿಯಾದ ಅಧಿಕಾರಿ ಮತ್ತು ಸಿಬ್ಬಂದಿಯವರ ಕಾರ್ಯಕ್ಕೆ ಮಾನ್ಯ ಪೊಲೀಸ್ ಆಯುಕ್ತರು, ಮಾನ್ಯ ಡಿ.ಸಿ.ಪಿ. (ಕಾ.ಸು.), ಮಾನ್ಯ ಡಿ.ಸಿ.ಪಿ. (ಅಪರಾಧ ಮತ್ತು ಸಂಚಾರ) ಹಾಗೂ ಮಾನ್ಯ ಎ.ಸಿ.ಪಿ. ಸಬ್ ಅರ್ಬನ್ ಉಪವಿಭಾಗ ಕಲಬುರಗಿ ನಗರ ರವರು ಮೆಚ್ಚುಗೆ ವ್ಯಕ್ತಪಡಿಸಿರುತ್ತಾರೆ.